# ಬಾಲಿವುಡ್ ಬೆಳದಿಂಗಳು!

34ನೇ ಪುಟದಿಂದ

## ಧಾರವಾಡದ ನಂಟು

ಪೃಥ್ವಿ ಥೇಟರ್ಸ್ 1956ರಲ್ಲಿ ಪುಣೆಗೆ ನಾಟಕ ಆಡಲು ಬಂದಾಗ ಧಾರವಾಡದ ಲಕ್ಷ್ಮೀ ಟಾಕೀಸ್‌ನಲ್ಲಿ ಮೂರು ದಿನ ಒಟ್ಟು ನಾಲ್ಕು ನಾಟಕಗಳನ್ನು ಆಡಿದ್ದರು. ಪೃಥ್ವಿರಾಜ್ ನಾಯಕ. ಶಶಿ ಸಹನಟ ಮತ್ತು ಅಸಿಸ್ಟೆಂಟ್ ಮ್ಯಾನೇಜರ್. 1916ರಲ್ಲಿಯೇ ಆರಂಭವಾದ ಧಾರವಾಡದ 'ಲಕ್ಷ್ಮೀ' ಟಾಕೀಸ್, 2017ರಲ್ಲಿ ಸರಕಾರದ ರಸ್ತೆ ಅಗಲೀಕರಣ ಯೋಜನೆಯಲ್ಲಿ ಬಳಿಕ 'ಶಹೀದ್' ಆಯಿತು. ಈಗ ಅದು ಮಾಸದ ನೆನಪು ಮಾತ್ರ. ಕಂಪೆನಿ ಇಲ್ಲಿಂದಲೇ ಕೋಲ್ಕತಾಗೆ ಪ್ರಯಾಣ ಬೆಳೆಸಿದ್ದು. ಆಗಲೇ ಶಶಿಗೆ ಜೆನಿಫರ್‌ಳ ದೋಸ್ತಿ ಶುರುವಾದದ್ದು. ಪುರಾನಾ ಜಮಾನಾದ ಹಲವು ಧಾರವಾಡಿಗರು ಈಗಲೂ ಹೆಮ್ಮೆಯಿಂದ ಇದನ್ನು ನೆನಪಿಸಿಕೊಳ್ಳುತ್ತಾರೆ.

ಕುಣಾಲ್ ಕಪೂರ್, ಕರಣ್ ಕಪೂರ್ ಶಶಿಯ ಇಬ್ಬರು ಪುತ್ರರು; ಸಂಜನಾ ಕಪೂರ್ ಮಗಳು. ಕುಣಾಲ್‌ನನ್ನು ನಾಯಕನಾಗಿ ಪರಿಚಯಿಸಲು ಶಶಿ 'ಜುನೂನ್' ಹಿಂದಿ ಚಿತ್ರ ತೆಗೆದ. ಮತ್ತೆರಡು ಚಿತ್ರ ನಿರ್ಮಿಸಿ ನಿರ್ದೇಶಿಸಿದರೂ ಕುಣಾಲ್‌ನ ಇಂಗ್ಲಿಷ್ ಶೈಲಿಯ ಹಿಂದಿ ಉಚ್ಚಾರದಿಂದಾಗಿ ಅವು ವಿಫಲವಾದವು. ಆತ ಬೆಳ್ಳಿತೆರೆಯಿಂದ ದೂರವಾದ. ಕಮರ್ಷಿಯಲ್ ಚಿತ್ರಗಳ ಹೀರೋ ಆಗಿ ಯಶಸ್ವಿಯಾಗಿದ್ದರೂ, ಶಶಿ ಕಲಾತ್ಮಕ ಚಿತ್ರಗಳ ಕಡೆಗೆ ಹೆಚ್ಚು ಒಲವು ಹೊಂದಿದ್ದ. ಜುನೂನ್ ಅಲ್ಲದೇ 'ಕಲಿಯುಗ್', 'ವಿಜೇತಾ', 'ಉತ್ಸವ್' ಮುಂತಾದ ಚಿತ್ರಗಳನ್ನು ನಿರ್ಮಿಸಿ ನಿರ್ದೇಶಿಸಿದರು. ಫ್ಯಾಂಟಸಿ ಚಿತ್ರ 'ಅಜೂಬಾ' ಕೂಡಾ ತೆರೆಗೆ ಬಂತು. ಅದರಲ್ಲಿ ಅಣ್ಣ ರಾಜ್‌ಕಪೂರ್‌ನ ಪುತ್ರ ರಿಷಿ ಕಪೂರ್, ಅಮಿತಾಭ್ ಬಚ್ಚನ್ ಕೂಡಾ ಶಶಿಯೊಂದಿಗೆ ನಟಿಸಿದ್ದರು.

'ದೀವಾರ್' ಚಿತ್ರದ 'ಮೇರೆ ಪಾಸ್ ಮಾ ಹೈ" ಎನ್ನುವ ಡೈಲಾಗ್ ಶಶಿ ಚಿತ್ರಜೀವನದ ಸೂಪರ್‌ಹಿಟ್ ಡೈಲಾಗ್. ಅಂದಿಗೂ, ಇಂದಿಗೂ, ಎಂದೆಂದಿಗೂ ಜನಮಾನಸದಲ್ಲಿ ಗಟ್ಟಿಯಾಗಿರುವ ಸಂಭಾಷಣೆ ಇದು. ಈ ಚಿತ್ರದ ನಟನೆಗಾಗಿ ಶಶಿಗೆ ಅತ್ಯುತ್ತಮ ಪೋಷಕ ನಟ ಫಿಲಂಫೇರ್ ಪ್ರಶಸ್ತಿ ಬಂತು. ಅಮಿತಾಭ್ ಮತ್ತು ಶಶಿ ಕಪೂರ್ ಜೋಡಿ ಬಾಲಿವುಡ್‌ನ ಆ ಕಾಲದ ಅತ್ಯುತ್ತಮ ಜೋಡಿಗಳಲ್ಲಿ ಏಕಮೇವಾದ್ವಿತೀಯ ಎನ್ನಿಸಿತ್ತು. ದೀವಾರ್ ಚಿತ್ರದ ಆ ಡೈಲಾಗ್ ಬಗ್ಗೆ ಪತ್ರಕರ್ತರು ಒಂದು ಪ್ರಶ್ನೆ ಕೇಳಿದ್ದರು– 'ಆ ಡೈಲಾಗ್ ಅನ್ನು ಅಷ್ಟೊಂದು ಇಮೋಷನಲ್ ಆಗಿ ಹೇಳಲು ನಿಮಗೆ ಹೇಗೆ ಸಾಧ್ಯವಾಯಿತು?' ಎನ್ನುವುದೇ ಆ ಪ್ರಶ್ನೆ. ಆಗ ಶಶಿ ಉತ್ತರಿಸಿದ್ದು ಬಹಳ ಮಾರ್ಮಿಕವಾಗಿದೆ – 'ಗಂಡ ಮೇರೆ ಪಾಸ್ ಬೀವಿ ನಹೀ ಎಂದೋ, ಮಕ್ಕಳು ಹಮಾರೆ ಪಾಸ್ ಮಾ ನಹೀ ಎಂದೋ ಹೇಳಬೇಕಾದ ಕಾಲಘಟ್ಟದಲ್ಲಿ ಈಗ ನಾವಿದ್ದೇವೆ. ಜೆನ್ನಿಫರ್ ನನಗೆ ಪತ್ನಿಯೂ ಹೌದು, ತಾಯಿಯೂ ಹೌದು..'

'ಚಲೇ ಥೇ ಸಾಥ್ ಮಿಲ್ ಕೆ,
ಚಲೇಂಗೆ ಸಾಥ್ ಮಿಲ್ ಕರ್,
ತುಮ್ಹೇ ರೂಕನಾ ಪಡೇಗಾ,
ಮೇರಿ ಆವಾಜ್ ಸುನ್ ಕರ್,

ಹಮಾರಿ ಜಾನ್ ಲೇಂಗೀ
ತುಮ್ಹಾರಿ ಯೇ ಅದಾಯೇಂ,
ಹಮೆ ಜೀನೇ ನ ದೇಂಗಿ,
ತುಮ್ಹಾರಿ ಯೇ ನಿಗಾಂಹೆ,
ಸಮಜ್‌ಲೋ ಬಾತ್ ಯೆ ದಿಲ್ ಕಿ,
ತುಮ್ಹೇ ದೇಂಗೆ ದುವಾಂಯೆ...

ಶಶಿ ಅಭಿಮಾನಿಗಳೆಲ್ಲಾ 'ಕೋರಸ್'ದಲ್ಲಿ ಶಶಿಗಾಗಿ ಈ ಹಾಡು ಹಾಡಿ ನಿಲ್ಲಿಸಬಹುದಿತ್ತೇನೋ! ಆದರೆ ಜನ್ಮದೊಂದಿಗೆ ಬೆನ್ನಿಗೆ ಬಿದ್ದಿರುವ ನಿಧನ ಖಚಿತ. ಹೇಳದೇ ಕೇಳದೇ ಬರುವ ಕಾಲ.

1984ರಲ್ಲಿ ಪತ್ನಿ ಜೆನಿಫರ್ ಕ್ಯಾನ್ಸರ್‌ನಿಂದ ಮೃತಪಟ್ಟ ಬಳಿಕ ಶಶಿಕಪೂರ್ ಆರೋಗ್ಯ ನಿಧಾನಕ್ಕೆ ಹದಗೆಟ್ಟಿತು. ಸ್ಲಿಮ್ ಆಗಿದ್ದ ಅವರು ಬಳಿಕ ಅತಿಯಾದ ತೂಕ ಏರಿಸಿಕೊಂಡರು. ಪೋಷಕ ಪಾತ್ರಗಳತ್ತ ಹೊರಳಿದರು. 1998ರಲ್ಲಿ 'ಜಿನ್ನಾ' ಚಿತ್ರದಲ್ಲಿ ನಿರೂಪಕನ ಪಾತ್ರ ವಹಿಸಿದ್ದೇ ಕೊನೆ.

'ಏಕ್‌ಥಾ ಬುಲ್ ಔರ್ ಏಕ್ ಥೀ ಬುಲ್‌ಬುಲ್,
ದೋನೋ ಚಮನ್ ಮೇ ರೆಹತೇ ಥೆ...'

–ಹೀಗೆ ಅಗಲಿ 'ಜೆನಿ' ಜೊತೆಗೆ ಸೇರಿಕೊಳ್ಳಲು ಶಶಿ ಆಕೆಯ ಮುಂದೆ ಅಲ್ಲಿ ಪ್ರತ್ಯಕ್ಷನಾಗಿರಬೇಕು. ಅಗಲಿದ ಆತ್ಮಗಳ ಪುನರ್ಮಿಲನವಾಯಿತೆಂಬ ಸಕಾರಾತ್ಮಕ ವಿಚಾರದೊಂದಿಗೆ, 'ಹೋಗಿ ಬಾ ಶಶಿ, ಇದೋ ನಿನಗೆ ಕೊನೆಯ ನಮಸ್ಕಾರ, ಶಬ್ಬಾಖೈರ್, ಗುಡ್ ಬೈ!'

